**ದಿನಾಂಕಃ 12.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದಃ**

1) ನಾನು ಎಸ್ ಎಸ್ ಎಲ್ ಸಿ ವ್ಯಾಸಂಗ ಮಾಡಿದ್ದೇನೆ. ನನ್ನ ತಂದೆಗೆ ಅಕ್ಕಮ್ಮ ಮತ್ತು ಸಾಕಮ್ಮ ಎಂಬ ಇಬ್ಬರು ಹೆಂಡತಿಯರು. ನಾನು 2ನೇ ಹೆಂಡತಿಯ ಮಗ. 1ನೇ ಪ್ರತಿವಾದಿ ಮೊದಲನೇ ಹೆಂಡತಿಯ ಮಗ. ನನ್ನ ಇನ್ನೊಂದು ಹೆಸರು ನಾಗೇಶ, ಪ್ರತಿವಾದಿಯ ಇನ್ನೊಂದು ಹೆಸರು ಕೃಷ್ಣೇಗೌಡ. ಸ.ನಂ. 297/2ರಲ್ಲಿ ಮೂಲತಃ 1 ಎಕರೆ 24ಗುಂಟೆ ಜಮೀನಾಗಿತ್ತು. ಆ ಪೈಕಿ 37ಗುಂಟೆ ಜಮೀನು ಹೇಮಾವತಿ ನಾಲೆಗೆ ಭೂಸ್ವಾಧೀನವಾಗಿದೆ ಎಂದರೆ ಸರಿ. 27ಗುಂಟೆ ಜಮೀನು ನನಗೆ ಮತ್ತು 1ನೇ ಪ್ರತಿವಾದಿಗೆ ಉಳಿದಿರುತ್ತದೆ. ಸದರಿ ಸ್ವತ್ತನ್ನು ಸಮಾರ್ಧ ಭಾಗ ಮಾಡಿಕೊಂಡು ನಾನು ಮತ್ತು 1ನೇ ಪ್ರತಿವಾದಿ ಉಳುಮೆ ಮಾಡಿಕೊಂಡು ಸ್ವಾಧೀನದಲ್ಲಿದ್ದೀರಿ ಎಂದರೆ ಸಾಕ್ಷಿಯು ನಾನು 17 ½ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದೇನೆ ಎಂದು ನುಡಿಯುತ್ತಾರೆ.

2) ಸಾಕ್ಷಿಗೆ ದಿನಾಂಕಃ 12.01.1998ರ ಪಂಚಾಯಿತಿ ಪಾಲುಪಟ್ಟಿಯನ್ನು ತೋರಿಸಲಾಗಿ ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ದಾಖಲಾತಿಯನ್ನು ನಿ.ಡಿ.1 ಎಂದು ಗುರುತಿಸಲಾಯಿತು. (ಸದರಿ ದಾಖಲಾತಿಯು ನೊಂದಾಯಿತವಲ್ಲದ ದಾಖಲಾತಿಯಾಗಿ-ರುವುದರಿಂದ ಪ್ರಶ್ನಿಸಲಾಗಿ ಪ್ರತಿವಾದಿ ಪರ ವಕೀಲರು ಸದರಿ ದಾಖಲಾತಿಯನ್ನು Collateral ಉದ್ದೇಶಕ್ಕಾಗಿ ಹಾಜರುಪಡಿಸಲಾಗಿದೆ ಎಂದು ತಿಳಿಸಿರುತ್ತಾರೆ) ಸದರಿ ಪಾಲುಪಟ್ಟಿಯಂತೆ ನನಗೆ 9½ ಗುಂಟೆ ಜಮೀನು ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ದಾಖಲಾತಿಯನ್ನು ನನ್ನನ್ನು ಬಿಟ್ಟು ಅವರೇ ತಿದ್ದಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಪಾಲುಪಟ್ಟಿಯ ಐಟಂ ನಂ. 7ರಲ್ಲಿ ಯಾವುದೇ ತಿದ್ದುಪಡಿಯಾಗಿಲ್ಲ ಎಂದರೆ ಸಾಕ್ಷಿಯು ನನಗೆ 17 ½ ಗುಂಟೆ ಜಮೀನು ಬಂದಿದ್ದು ಅದನ್ನು 9½ಗುಂಟೆ ಎಂದು ತಿದ್ದುಪಡಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

3) ನಾನು 1ನೇ ಪ್ರತಿವಾದಿಗಿಂತ ದೊಡ್ಡವನು ಎಂದರೆ ಸರಿ. ಹಾಗಾಗಿ ನಾನೇ ಕುಟುಂಬದ ವ್ಯವಹಾರಗಳನ್ನು ಮಾಡಿಕೊಂಡು ಬರುತ್ತಿದ್ದೇನೆ ಎಂದರೆ ಸರಿ. ಹಾಗಾಗಿ ನಿ.ಡಿ.1 ಅನ್ನು ನಾನೇ ಮುಂದೆ ನಿಂತು ಮಾಡಿಸಿರುತ್ತೇನೆ ಎಂದರೆ ಸಾಕ್ಷಿಯು ನಾನು ಹೋಗಿದ್ದೆ, ಆದರೆ ನನ್ನ ಸಮಕ್ಷಮದಲ್ಲಿ ನಿ.ಡಿ. 1 ಅನ್ನು ಮಾಡಿಲ್ಲ ಎಂದು ನುಡಿಯುತ್ತಾರೆ. ನಿ.ಡಿ.1ರಲ್ಲಿ 1ನೇ ಪ್ರತಿವಾದಿಗೆ 9½ಗುಂಟೆ ಎಂದು ಕೈ ತಪ್ಪಿನಿಂದ ನಮೂದಾಗಿದೆ ಎಂದರೆ ಅದನ್ನು ಅವರು ಮಾಡಿಕೊಂಡಿದ್ದು ನನಗೂ ಅದಕ್ಕೂ ಸಂಬಂಧವಿಲ್ಲ ಎಂದು ನುಡಿಯುತ್ತಾರೆ. ನಿ.ಡಿ.1ರಲ್ಲಿ ನನಗೆ ಮತ್ತು ಪ್ರತಿವಾದಿಗೆ ತಲಾ 13½ಗುಂಟೆ ಎಂದು ನಮೂದಾಗಬೇಕಿತ್ತು, ಆದರೆ ಕೈತಪ್ಪಿನಿಂದ 9½ಗುಂಟೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ.

4) ನಿ.ಡಿ.1ರಲ್ಲಿ ನನಗೆ ಮತ್ತು ಪ್ರತಿವಾದಿಗೆ 13½ಗುಂಟೆಗೆ ಇರುವಂತೆ ಚೆಕ್ಕುಬಂದಿ

ನಮೂದಾಗಿದೆ ಎಂದರೆ ಸರಿಯಲ್ಲ. ನಾನು ವಾದಪತ್ರದ ಪ್ಯಾರಾ 2ರಲ್ಲಿ ಪಾಲುಪಟ್ಟಿಯಂತೆ ದಾವಾ ಸ್ವತ್ತು ನನ್ನ ಭಾಗಕ್ಕೆ ಬಂದಿದೆ ಎಂದು ನಮೂದಿಸಿದ್ದು ನಿ.ಡಿ. 1ರಲ್ಲಿ 9½ಗುಂಟೆ ಮಾತ್ರ ಭಾಗಕ್ಕೆ ಬಂದಿದೆ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಅದನ್ನು 1ನೇ ಪ್ರತಿವಾದಿ ಹಾಗೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

5) ಸಾಕ್ಷಿಗೆ ಫೋಟೋ ಒಂದನ್ನು ತೋರಿಸಲಾಗಿ ಆ ಪ್ರಕಾರವಾಗಿ ತಲಾ 13½ಗುಂಟೆ ಜಮೀನಿನಲ್ಲಿ ತಾನು ಮತ್ತು 1ನೇ ಪ್ರತಿವಾದಿ ಸ್ವಾಧೀನದಲ್ಲಿರುವುದಾಗಿ ಸೂಚಿಸಿದರೆ ಸಾಕ್ಷಿಯು ಸದರಿ ಫೋಟೋವನ್ನು ನಿರಾಕರಿಸಿರುತ್ತಾರೆ. ನಿ.ಡಿ.1 ಅನ್ನು ಪ್ರಶ್ನಿಸಿ ದಾವಾ ಹಾಕಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಇದೇ ದಾವಾವನ್ನು ಸಲ್ಲಿಸಿರುವುದಾಗಿ ನುಡಿಯುತ್ತಾರೆ. 1ನೇ ಪ್ರತಿವಾದಿ ಸಲ್ಲಿಸಿದ್ದ ಅಸಲು ದಾವಾ 372/17 ವಜಾ ಆಗಿರುತ್ತದೆ. ಸದರಿ ಆದೇಶದ ವಿರುದ್ಧ 1ನೇ ಪ್ರತಿವಾದಿ ಅಪೀಲು ಸಲ್ಲಿಸಿರುತ್ತಾರೆ ಎಂದರೆ ಸರಿ. ತಾಂತ್ರಿಕ ಕಾರಣದಿಂದಾಗಿ ಸದರಿ ಅಪೀಲನ್ನು ಹಿಂಪಡೆಯಲಾಯಿತು ಎಂದರೆ ನನಗೆ ಗೊತ್ತಿಲ್ಲ.

6) 1ನೇ ಪ್ರತಿವಾದಿ ಉಳಿಕೆ 4ಗುಂಟೆಗೆ ಸಂಬಂಧಿಸಿದಂತೆ ಅಸಲು ದಾವಾ ನಂ. 628/25ರಂತೆ ದಾವಾ ಸಲ್ಲಿಸಿದ್ದಾರೆ ಎಂದರೆ ಸರಿ. ನಿ.ಡಿ.1ರಂತೆ ಉಳಿಕೆ ಸ್ವತ್ತುಗಳು ಖಾತೆಯಾಗಿವೆ ಎಂದರೆ ಸರಿ. ಎಂ.ಆರ್ 22/2006-07ರಂತೆ ವೈಯಕ್ತಿಕ ಪತ್ರದ ಮೇರೆಗೆ ಖಾತೆಯಾಗಿದೆ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಪಾಲುಪಟ್ಟಿಯ ಮೇರೆಗೆ ಮಾಡಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಪಾಲುಪಟ್ಟಿಯಂತೆ ಖಾತೆಯಾಗಿದ್ದರೆ ವಿಭಾಗಪತ್ರದಂತೆ ಎಂದು ನಮೂದಾಗುತ್ತಿತ್ತು ಎಂದರೆ ಸಾಕ್ಷಿಯು ಹಾಗೆಯೇ ನಮೂದಾಗಿದೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯ 4ಗುಂಟೆ ಜಮೀನನ್ನು ಸಹ ಸೇರಿಸಿಕೊಂಡು ಕಂದಾಯ ಅಧಿಕಾರಿಗಳನ್ನು ಶರೀಖು ಮಾಡಿಕೊಂಡು 17½ಗುಂಟೆಗೆ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ 13½ಗುಂಟೆ ಜಮೀನಿನ ಮೇಲೆ ಮಾತ್ರ ಹಕ್ಕಿದೆ ಎಂದರೆ ಸಾಕ್ಷಿಯು 17½ಗುಂಟೆ ಮೇಲೆ ಹಕ್ಕಿದೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯ 13½ಗುಂಟೆಗೆ ಸೇರಿರುವ 4ಗುಂಟೆ ಜಮೀನಿನಲ್ಲಿ ನನಗೆ ಯಾವುದೇ ಹಕ್ಕು ಮತ್ತು ಸ್ವಾಧೀನವಿಲ್ಲ ಎಂದರೆ ಸಾಕ್ಷಿಯು ನಾನು 17½ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತೇನೆ ಎಂದು ನುಡಿಯುತ್ತಾರೆ.

7) 1ನೇ ಪ್ರತಿವಾದಿ ಮೊದಲು ದಾವೆ ಸಲ್ಲಿಸಿದ್ದರಿಂದ ಅದಕ್ಕೆ ಪ್ರತಿಯಾಗಿ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾವಾವನ್ನು ಪ್ರತಿವಾದಿಗಳು ನಾನು ದಾವಾ ಸ್ವತ್ತಿನ ಒಳಗೆ ಹೋಗುವಾಗ ಮಚ್ಚು ದೊಣ್ಣೆ ತೆಗೆದುಕೊಂಡು ಬಂದು ಹೊಡೆಯಲು ಪ್ರಯತ್ನಿಸಿದ್ದರಿಂದ ಸಲ್ಲಿಸಿರುತ್ತೇನೆ. ಈ ಸಂಬಂಧ ಎಫ್ ಐ ಆರ್ ಆಗಿದ್ದು ನಿಖರವಾಗಿ ದಿನಾಂಕವನ್ನು ಹೇಳಲು ಆಗುವುದಿಲ್ಲ. 13½ಗುಂಟೆ ಜಮೀನಿನಲ್ಲಿ 1ನೇ ಪ್ರತಿವಾದಿ ತೆಂಗು ಮತ್ತು ಇತರೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಎಂದರೆ ಸಾಕ್ಷಿಯು 9½ಗುಂಟೆ ಜಮೀನಿನಲ್ಲಿ ಮಾತ್ರ ಬೆಳೆಯುತ್ತಿದ್ದಾರೆ ಎಂದು ನುಡಿಯುತ್ತಾರೆ.

8) ನನ್ನ ಜಮೀನಿನ ಪೂರ್ವಕ್ಕೆ 1ನೇ ಪ್ರತಿವಾದಿಯ ಸ್ವತ್ತು ಇದೆ. 27ಗುಂಟೆ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆ-ದೇವೇನಹಳ್ಳಿಯ ದೇವರಾಜು, ಪಶ್ಚಿಮಕ್ಕೆ-ನಾಲೆ, ಉತ್ತರಕ್ಕೆ-ನಾರಿಗೌಡ

ಮತ್ತು ದಕ್ಷಿಣಕ್ಕೆ–ದಾರಿ ಆಗಿರುತ್ತದೆ. ನಾನು ಚನ್ನರಾಯಪಟ್ಟಣದಲ್ಲಿ ಮತ್ತು ಗೊಲ್ಲರಹೊಸಹಳ್ಳಿ ಎರಡೂ ಕಡೆ ವಾಸವಿರುತ್ತೇನೆ. ನಾನು ಗುತ್ತಿಗೆದಾರನಾಗಿರುವುದಿಲ್ಲ, ವ್ಯವಸಾಯ ಮಾಡುತ್ತೇನೆ. ದಾವಾ ಸ್ವತ್ತಿನ ಮೇಲೆ ನನಗೆ ಸಂಪೂರ್ಣ ಹಕ್ಕು ಮತ್ತು ಸ್ವಾಧೀನ ಇಲ್ಲದೇ ಇದ್ದರೂ ಖಾತೆಯಲ್ಲಿ ವ್ಯತ್ಯಾಸವಾಗಿರುವುದರಿಂದ 1ನೇ ಪ್ರತಿವಾದಿಯ 4ಗುಂಟೆ ಜಮೀನನ್ನು ಕಬಳಿಸಲು ಸುಳ್ಳು ವ್ಯಾಜ್ಯ ಕಾರಣದೊಂದಿಗೆ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ 17½ಗುಂಟೆ ಜಮೀನು ನನ್ನ ಹಿಸ್ಸೆಗೆ ಬಂದಿರುವ ಬಗ್ಗೆ ಯಾವುದೇ ಹಕ್ಕು ದಾಖಲೆ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿ ಮುದ್ರಿಸಲಾಗಿದೆ .)

ಸಾ.ಓ.ಹೇ.ಕೇ.ಸ.ಇ.ಎಂ.ಒ.

3ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಚನ್ನರಾಯಪಟ್ಟಣ